ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2018–19 ದಿನಾಂಕ: 21–01–2019

## ಪತ್ರಿಕಾ ಪ್ರಕಟಣೆ

# ಬೇಟಿ ಬಚಾವೊ ಬೇಟಿ ಪಡಾವೊ ಕಾರ್ಯಕ್ರಮದಲ್ಲಿ ಹೆಸರಿನಲ್ಲಿ ವಂಚನೆ ಮಾಡುವವರ ವಿರುದ್ಧ ಕ್ರಮ

ಬೆಂಗಳೂರು, ಜನವರಿ 21 (ಕರ್ನಾಟಕ ವಾರ್ತೆ)

ಬೇಟಿ ಬಚಾವೊ ಬೇಟಿ ಪಡಾವೊ ಕಾರ್ಯಕ್ರಮದಡಿಯಲ್ಲಿ ರೂ 2–00 ಲಕ್ಷ ನಗದು ಉತ್ತೇಜನ ನೀಡುವುದಾಗಿ ಕೆಲವು ಅನಧಿಕೃತ ಸಂಘಟನೆಗಳು / ಸ್ವಯಂ ಸೇವಾ ಸಂಸ್ಥೆಗಳು / ವ್ಯಕ್ತಿಗಳು ಹೆಣ್ಣು ಮಕ್ಕಳ ವೈಯಕ್ತಿಕ ಮಾಹಿತಿಯನ್ನು ನಮೂನೆಯಲ್ಲಿ ಪಡೆದು ವಂಚಿಸುತ್ತಿರುವುದು ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಯ ಇಲಾಖೆಯ ಸಚಿವಾಲಯದ ಗಮನಕ್ಕೆ ಬಂದಿರುತ್ತದೆ.

**ಸಾರ್ವಜನಿಕ ಗಮನಕ್ಕೆ:**

- ಬೇಟಿ ಬಚಾವೊ ಬೇಟಿ ಪಡಾವೊ ಯೋಜನೆಯಡಿಯಲ್ಲಿ ಯಾರಿಗೂ ನಗದು ವಿತರಣೆ ಮಾಡುವ ಕಾರ್ಯಕ್ರಮ ಇರುವುದಿಲ್ಲ.
- ಅನಧಿಕೃತ ಸಂಸ್ಥೆಗಳು/ವ್ಯಕ್ತಿಗಳು ಈ ಯೋಜನೆಯಡಿಯ ಹಣವನ್ನು ನೀಡುವುದಾಗಿ ಭರವಸೆ ನೀಡಿ ಸಾರ್ವಜನಿಕರನ್ನು ಮೋಸ ಮಾಡುತ್ತಿವೆ.
- ಈ ರೀತಿಯ ವಂಚನೆಯನ್ನು ಮಾಡುವ ಅಥವಾ ಪ್ರಚಾರ ಮಾಡುವವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು.
- ಇಂತಹ ವಂಚನೆಗಳು ಬೆಳಕಿಗೆ ಬಂದಾಗಲೆಲ್ಲಾ ಎಫ್.ಐ.ಆರ್.ಗಳನ್ನು ಈಗಾಗಲೇ ನೋಂದಾಯಿಸಲಾಗಿದೆ.
- ಇಂತಹ ವಂಚಕರ ಬಲೆಗೆ ಬೀಳದಂತೆ ಸಾರ್ವಜನಿಕರಿಗೆ ಸಲಹೆ/ಸೂಚನೆ ನೀಡಲಾಗಿದೆ. ಈ ಯೋಜನೆಯಡಿ ವಂಚಕರು ನಮೂನೆಯಲ್ಲಿ ಕೋರುವ ಯಾವುದೇ ವಯಕ್ತಿಕ ವಿವರಗಳನ್ನು

ಅಂದರೆ ಆಧಾರ್ ಕಾರ್ಡ್, ಬ್ಯಾಂಕ್ ವಿವರಗಳು, ದೂರವಾಣಿ/ಮೊಬೈಲ್ ಸಂಖ್ಯೆ/ಇ-ಮೇಲ್ ಐ.ಡಿ/ಇತರೆ ಯಾವುದೇ ಮಾಹಿತಿಗಳನ್ನು ಬಹಿರಂಗಪಡಿಸಬಾರದು.

- ಇಂತಹ ವಂಚನೆಗಳನ್ನು ಮಾಡುವವರ ಬಗ್ಗೆ ವ್ಯಕ್ತಿಗಳ/ಸಂಸ್ಥೆಗಳ ಹೆಸರನ್ನು ಸ್ಥಳೀಯ ಪೊಲೀಸ್ ಠಾಣೆಗೆ ತಿಳಿಸಿ.
- ನಿಮ್ಮ ಸ್ನೇಹಿತರು, ಸಂಬಂಧಿಕರು ಹಾಗೂ ನಿಮ್ಮನ್ನು ಸಂಪರ್ಕಿಸುವ ಎಲ್ಲರಿಗೂ ಇಂತಹ ವಂಚಕರ ವಿರುದ್ಧ ಜಾಗರೂಕರಾಗಿರಲು ತಿಳಿಸಿದೆ.

ಈ ಹಿನ್ನೆಲೆಯಲ್ಲಿ ಬೇಟಿ ಬಚಾವೊ ಬೇಟಿ ಪಡಾವೊ ಕಾರ್ಯಕ್ರಮದಡಿ ಹೆಣ್ಣು ಮಕ್ಕಳಿಗೆ ರೂ 2-00 ಲಕ್ಷ ನಗದು ನೀಡುವ ಕಾರ್ಯಕ್ರಮ ಇರುವುದಿಲ್ಲ. ಈ ರೀತಿ ಮುಗ್ಧ ಹೆಣ್ಣು ಮಕ್ಕಳನ್ನು ಸುಳ್ಳು ಭರವಸೆ ನೀಡಿ ಮೋಸ ಮಾಡುವವರನ್ನು ಕಾನೂನು ಬಾಹಿರವಾಗಿ ಶಿಕ್ಷೆಗೆ ಗುರಿಪಡಿಸಲಾಗುವುದು ಎಂದು ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

## ದೇಶದ ಯಾವುದೇ ವಿಪತ್ತನ್ನು ಸಮರ್ಥವಾಗಿ ನಿರ್ವಹಿಸಿ: ಬಿ.ಹೆಚ್. ಅನಿಲ್‌ಕುಮಾರ್

ಬೆಂಗಳೂರು, ಜನವರಿ 21 (ಕರ್ನಾಟಕ ವಾರ್ತೆ)

ದೇಶದಲ್ಲಿ ಯಾವುದೇ ವಿಪತ್ತನ್ನು ಸಮರ್ಥವಾಗಿ, ತ್ವರಿತಗತಿಯಲ್ಲಿ ನಿರ್ವಹಿಸಲು ಉತ್ತಮ ಪರಿಹಾರೋಪಾಯಗಳನ್ನು ಅಳವಡಿಸುವುದು ಮುಖ್ಯ ಎಂದು ಉನ್ನತ ಶಿಕ್ಷಣ ಇಲಾಖೆಯ ಸರ್ಕಾರದ ಅಪರ ಕಾರ್ಯದರ್ಶಿ ಬಿ.ಹೆಚ್. ಅನಿಲ್‌ಕುಮಾರ್ ಅವರು ತಿಳಿಸಿದರು.

ಅವರು ಇಂದು ಖಾಸಗಿ ಹೋಟೆಲ್‌ನಲ್ಲಿ ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಹಾಗೂ ರಾಷ್ಟ್ರೀಯ ವಿಪತ್ತು ನಿರ್ವಹಣಾ ಕೇಂದ್ರ, ಗೃಹ ಮಂತ್ರಾಲಯ ನವದೆಹಲಿ ಇವರ ಸಂಯುಕ್ತಾಶ್ರಾಯದಲ್ಲಿ ಹಮ್ಮಿಕೊಳ್ಳಲಾಗದ 'ವಿಪತ್ತಿನ ನಂತರದ ಮಾಲ್ಯಮಾಪನದ ಅಗತ್ಯತೆಗಳು' ಕುರಿತ 3 ದಿನಗಳ ಕಾರ್ಯಾಗಾರದಲ್ಲಿ ಭಾಗವಹಿಸಿ ಮಾತನಾಡಿದರು.

ಭಾರತವು ಎಲ್ಲಾ ಬಗೆಯ ವಿಪತ್ತುಗಳನ್ನು ಅನುಭವಿಸಿದೆ. ಬರ, ಭೂಕಂಪ, ಭೂಕುಸಿತ, ಪ್ರವಾಹ ಹೀಗೆ ಹಲವು ವಿಕೋಪಗಳನ್ನು ಭಾರತ ಕಂಡಿದೆ. ಈ ವಿಕೋಪಗಳು ಬಂದಾಗ ಜನರ ಜೀವ, ಆಸ್ತಿಪಾಸ್ತಿಗೆ ತೀವ್ರ ಹಾನಿಯುಂಟಾಗುತ್ತದೆ. ಮೊದಲನೆಯದಾಗಿ ವಿಕೋಪದಿಂದ ಆಗುವ ನಷ್ಟವನ್ನು ಅಂದಾಜಿಸಬೇಕು. ರಾಜ್ಯವು 1000 ಕೋಟಿ ರೂ. ಗಳ ನಷ್ಟದ ಅಂದಾಜು ನೀಡಿದರೆ, ಕೇಂದ್ರ ನೀಡುವುದು ಕೇವಲ 250 ಕೋಟಿ ರೂ. ಈ ಅನುದಾನದಲ್ಲಿಯೇ ಆಗಿರುವ ವಸತಿ ನಿರ್ಮಾಣ, ಜನರ ಚಿಕಿತ್ಸೆ ಹೀಗೆ ಹಲವು ಪರಿಹಾರ ಕಾರ್ಯಗಳನ್ನು ನೋಡಬೇಕಾಗುತ್ತದೆ. ಎರಡನೆಯದಾಗಿ ಜನರಿಗೆ ವಿಕೋಪದಿಂದ ಆಗುವ ಸಾಮಾಜಿಕ, ಆರ್ಥಿಕ ಹಾಗೂ ಪರಿಸರ ಹಾನಿಯನ್ನು ಅವಲೋಕಿಸಿ ಅದಕ್ಕೆ ಸೂಕ್ತ ಪರಿಹಾರ

ಕಂಡುಕೊಳ್ಳಬೇಕಾಗುತ್ತದೆ. ಕೇರಳದಲ್ಲಿ ಇತ್ತೀಚೆಗೆ ಉಂಟಾದ ಪ್ರವಾಹದಿಂದ ಸಾವಿರಾರು ಜನ ಮನೆ, ಆಸ್ತಿ ಕಳೆದುಕೊಂಡರು. ಹಲವರು ಪ್ರಾಣ ಕಳೆದುಕೊಮಡರು. ಕೇರಳಕ್ಕೆ 26,000/- ಕೋಟಿ ರೂ. ಅನುದಾನವು ವಿಕೋಪ ನಿರ್ವಹಣೆಗೆ ಬೇಕೆಂದು ಅಂದಾಜಿಸಲಾಗಿತ್ತು. ಅಲ್ಲದೆ ಕೊಡಗಿನಲ್ಲಿ ಸಹ ಪ್ರವಾಹದಿಂದ ಆಸ್ತಿ, ಜೀವಹಾನಿ ಸಂಭವಿಸಿದೆ. ವಿಶ್ವಬ್ಯಾಂಕ್ ಸಹಯೋಗದಲ್ಲಿ ವಿಕೋಪ ನಿರ್ವಹಣೆಗೆ ಹಲವು ಪರಿಹಾರ ಕ್ರಮಗಳನ್ನು ಅಳವಡಿಸಲು ಕ್ರಮಕೈಗೊಳ್ಳಲಾಗಿದೆ. ಇದರಿಂದ ಹಾನಿಗೊಳಗಾದವರಿಗೆ ಸೂಕ್ತ ರಕ್ಷಣೆ ನೀಡಲು ಸಹಕಾರಿಯಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ವಿಕೋಪ ನಿರ್ವಹಣಾ ಪ್ರಾಧಿಕಾರದ ತಜ್ಞ ಡಾ ಜಿ. ವಿಶ್ವನಾಥ್ ಮಾತನಾಡಿ ವಿಕೋಪದ ಸಂದರ್ಭ ಹಲವು ಸೂಕ್ಷ್ಮ ಸಂಗತಿಗಳನ್ನು ನಿರ್ವಹಿಸಬೇಕು. ಜನರಿಗೆ ಮನೋಸ್ಥೆರ್ಯ ತುಂಬಿ ಅವರ ಆರೋಗ್ಯ, ಸಾಮಾಜಿಕ ಸಮಸ್ಯೆಗಳ ಪರಿಹಾರ ಕಂಡುಕೊಳ್ಳಬೇಕು. ಇತರ ಖಾಸಗಿ ವಲಯ, ಸ್ವಯಂಸೇವಾ ಸಂಸ್ಥೆಗಳ ಪ್ರಯೋಜನ ಸಹ ಪಡೆಯಬೇಕೆಂದರು.

ಕಾರ್ಯಕ್ರಮದಲ್ಲಿ ಮಾತನಾಡಿದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆಯ ಪ್ರೊ ಸಂತೋಷ್ ಕುಮಾರ್ ಪ್ರವಾಹ, ಭೂಕಂಪ ಇಂತಹ ವಿಕೋಪಗಳನ್ನು ಹೆಸರಿಸಿದಾಗಲೆ ಜನರ ಮನಸ್ಸು ತಲ್ಲಣಗೊಳ್ಳುತ್ತದೆ. ಜನ ಮನೆ, ನೆಲ, ಆಪ್ತರನ್ನು ಕಳೆದುಕೊಂಡು ಅಕ್ಷರಸಹ ಅನಾಥರಾಗುತ್ತಾರೆ. ಮಕ್ಕಳು ಹೆತ್ತವರನ್ನು ಕಳೆದುಕೊಂಡು ಪರೀಕ್ಷೆ ಬರೆಯಲು ಸಹ ಅಸಮರ್ಥರಾಗುತ್ತಾರೆ. ಜನರು ದೈಹಿಕ ಹಾಗೂ ಮಾನಸಿಕವಾಗಿ ತೀವ್ರ ಘಾಸಿ ಅನುಭವಿಸುತ್ತಾರೆ. ಗುಜರಾತ್‌ನಲ್ಲಿ 2001 ರಲ್ಲಿ ನಡೆದ ಭೂಕಂಪದಿಂದ 11 ಲಕ್ಷ ಮನೆಗಳು ನಾಶವಾದವು. 10,000 ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಸ್ಥಗಿತಗೊಂಡು, 50,000 ಲಕ್ಷ ಜನಕ್ಕೆ ಪರಿಹಾರ ನೀಡಲಾಗಿತ್ತು. 13,805 ಜನರ ಪ್ರಾಣ ಕಳೆದುಕೊಂಡು 1,67,000 ಜನ ಗಾಯಗೊಂಡಿದ್ದರು. 2000 ಶಾಲೆಗಳು, 300 ಆಸ್ಪತ್ರೆಗಳು ವಿಕೋಪದಿಂದ ನಾಶಗೊಂಡಿತ್ತು. ಆದರೂ ಗುಜರಾತ್ ರಾಜ್ಯದಲ್ಲಿ ಧೃತಿಗೆಡದೆ ಸಮರೋಪಾದಿಯಲ್ಲಿ ಪರಿಹಾರ ಕಾರ್ಯ ನಡೆಸಲಾಯಿತು ಎಂದರು.

ಕಾರ್ಯಕ್ರಮದಲ್ಲಿ ಕಂದಾಯ ಇಲಾಖೆ (ರಾಜ್ಯ ವಿಪತ್ತು ನಿರ್ವಹಣೆ) ಉಪಕಾರ್ಯದರ್ಶಿ ನಾರಾಯಣಪ್ಪ ವಂದನಾರ್ಪನೆ ಸಲ್ಲಿಸಿದರು.

## ಜನವರಿ 22ರಂದು ರಾಜ್ಯಾದ್ಯಂತ ರಜೆ ಹಾಗೂ ಜನವರಿ 23 ರವರೆಗೆ ಶೋಕಾಚರಣೆ

ಬೆಂಗಳೂರು, ಜನವರಿ 21 (ಕರ್ನಾಟಕ ವಾರ್ತೆ)

ಡಾ. ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು, ಸಿದ್ಧಗಂಗಾ ಮಠ, ತುಮಕೂರು ಇವರು ದಿನಾಂಕ: 21-01-2019 ರಂದು ನಿಧನ ಹೊಂದಿರುತ್ತಾರೆ,

ದಿವಂಗತರ ಗೌರವಾರ್ಥವಾಗಿ ರಾಜ್ಯಾದ್ಯಾದಂತ ಎಲ್ಲಾ ಶಾಲಾ ಕಾಲೇಜುಗಳಿಗೆ ಹಾಗೂ ಸರ್ಕಾರಿ ಕಚೇರಿಗಳಿಗೆ ದಿನಾಂಕ: 22–01–2019ರ ಮಂಗಳವಾರದಂದು ಸಾರ್ವಜನಿಕ ರಜೆಯನ್ನು ಘೋಷಿಸಿದೆ. ಅಲ್ಲದೆ, ಜನವರಿ 21 ರಿಂದ 23 ರವರೆಗೆ ಮೂರು ದಿನಗಳವರೆಗೆ ರಾಜ್ಯಾದ್ಯಾಂತ ಶೋಕವನ್ನು ಆಚರಿಸಲಾಗುವುದು ಈ ಅವಧಿಯಲ್ಲಿ ಯಾವುದೇ ಅಧಿಕೃತ ಮನೋರಂಜನಾ ಕಾರ್ಯಕ್ರಮಗಳು ಇರುವುದಿಲ್ಲ ಹಾಗೂ ನಿಯತವಾಗಿ ಹಾರಿಸಲ್ಪಡುವ ಸರ್ಕಾರದ ಎಲ್ಲಾ ಕಟ್ಟಡಗಳ ಮೇಲೆ ರಾಷ್ಟ್ರಧ್ವಜವನ್ನು ಅರ್ಧಮಟ್ಟದಲ್ಲಿ ಹಾರಿಸಲಾಗುವುದು.

ಈ ಆದೇಶವು ನೆಗೋಷಿಯೆಬಲ್ ಇನ್ಸ್ಟ್ರುಮೇಂಟ್ ಆಕ್ಟ್ 1881 ರ ಪ್ರಕಾರವು ಕೂಡ ಸಾರ್ವಜನಿಕ ರಜೆಯೆಂದು ಘೋಷಿಸಿದೆ. ಮೃತರ ಅಂತ್ಯಕ್ರಿಯೆಯನ್ನು ಸಕಲ ಸರ್ಕಾರಿ ಗೌರವಗಳೊಂದಿಗೆ ಆಚರಿಸಲಾಗುವುದು ಎಂದು ಸರ್ಕಾರ ತನ್ನ ಆದೇಶದಲ್ಲಿ ತಿಳಿಸಿದೆ.